# 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

## ಸ್ಪೆಷಲ್ ಸಿ. ನಂ.113/2023

ದಿನಾಂಕ 31.10.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 16 ಪ್ರಾಸಾ - 15

| | | |
|---|---|---|
| ಹೆಸರು | ಃ | ಮುತ್ತಯ್ಯ |
| ತಂದೆಯ ಹೆಸರು | ಃ | ದಾಸಪ್ಪ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ಹೆಚ್.ಸಿ.63, ಅಕ್ಕೂರು ಪೊಲೀಸ್ ಠಾಣೆ |
| ವಾಸಸ್ಥಳ | ಃ | ಅಕ್ಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2022 ರಿಂದ ಇಲ್ಲಿಯವರೆಗೆ ನಾನು ಅಕ್ಕೂರು ಪೊಲೀಸ್ ಠಾಣೆಯಲ್ಲಿ ಹೆಚ್.ಸಿ.63 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 10.04.2023 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗೆ ಮಧ್ಯಾಹ್ನರ 3.45 ರ ಸಮಯದಲ್ಲಿ ವಿಜಯಮ್ಮ ಎಂಬ ಮಹಿಳೆ ಠಾಣೆಗೆ ಹಾಜರಾಗಿ ನೀಡಿದಂತಹ ಮುದ್ರಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 58/2023 ನ್ನು ದಾಖಲಿಸಿಕೊಂಡೆ. ದೂರನ್ನು ಸ್ವೀಕರಿಸಿದ ಸಲುವಾಗಿ ಸಹಿ ಮಾಡಿದ್ದು ದೂರು ನಿ.ಪಿ.1 ಇದ್ದು, ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನನ್ವಯ ಪ್ರ.ವ.ಮಾ.ಯನ್ನು ಗುನ್ನೆ ಸಂಖ್ಯೆ.58/2023ರಲ್ಲಿ ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಮತ್ತು ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದ ಪ್ರ.ವ.ಮಾಹಿತಿಯನ್ನು ಈಗ ನೋಡುತ್ತಿದ್ದು ನಿ.ಪಿ.14 ಹಾಗೂ ಸಾಕ್ಷಿಯ ಸಹಿಯನ್ನು 14(ಎ) ಎಂದು ಗುರುತಿಸಲಾಯಿತು. ಕೃತ್ಯವು ವಿಶೇಷ ಪ್ರಕರಣಕ್ಕೆ

ಸಂಬಂಧಿಸಿದ್ದಾಗಿರುವ ಕಾರಣ ಮುಂದಿನ ತನಿಖೆಗಾಗಿ ಪ್ರಕರಣವನ್ನು ಮಾನ್ಯ ಡಿವೈಎಸ್‌ಪಿ ಚಾಸಾ 17 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಎಸ್.ಎನ್.ಜಿ.., ವಕೀಲರಿಂದ ಆರೋಪಿಗಳ ಪರವಾಗಿಃ**

3. ಪಿರ್ಯಾದುದಾರಳ ಜೊತೆ ಬೇರೆ ಯಾರೂ ಠಾಣೆಗೆ ಬಂದಿರಲಿಲ್ಲ. ಠಾಣಾ ಅಂಕಿಅಂಶಕ್ಕೋಸ್ಕರ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಜಮೀನು ವಿಚಾರಕ್ಕೆ ಸಂಬಂಧಿಸಿದಂತೆ ದೂರು ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ರಾಜಕೀಯ ಪ್ರೇರಣೆಯಿಂದಾಗಿ ದೂರು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಇರಲಿಲ್ಲ, ಪಿರ್ಯಾದಾರಳು ನೀಡಿದಂತಹ ಸುಳ್ಳು ದೂರಿನನ್ವಯ ಪ್ರಥಮ ವರ್ತಮಾನ ಮಾಹಿತಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.